ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	(407)232
ಸದಸ್ಯರ ಹೆಸರು	:	ಶ್ರೀ ಜಯಚಂದ್ರ ಟಿ.ಬಿ
ಉತ್ತರಿಸುವ ಸಚಿವರು	:	(ಶ್ರೀ ಆರ್.ಅಶೋಕ್)
	:	ಮಾನ್ಯ ಸಾರಿಗೆ ಸಚಿವರು

ಅ) ಶಿರಾ ತಾಲ್ಲೂಕಿನ ತಾವರೆಕೆರೆ ಮತ್ತು ಕಳ್ಳಂಬೆಳ್ಳಗಳು ಹೋಬಳಿ ಮುಖ್ಯಕೇಂದ್ರವಾಗಿದ್ದು ಅಲ್ಲಿ ರಾಜ್ಯ ರಸ್ತೆ ಸಾರಿಗೆಯ ಬಸ್ಸುಗಳನ್ನು ನಿಲ್ಲಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಸ್ಸುಗಳನ್ನು ನಿಲುಗಡೆಗೊಳಿಸಲು ಕ್ರಮ ಕೈಗೊಳ್ಳುವುದೇ; ಈ ಬಗ್ಗೆ ಸರ್ಕಾರದ ನಿಲುವೇನು;

ತಾವರೆಕೆರೆಯಲ್ಲಿ ವೇಗದೂತ ಸಾರಿಗೆಗಳಿಗೆ ಕೋರಿಕೆ ನಿಲುಗಡೆಯನ್ನು ನೀಡಲಾಗಿದೆ. ಶಿರಾ–ತಾವರೆಕೆರೆ ನಡುವೆ ಪ್ರಸ್ತುತ, 7 ಅನುಸೂಚಿಗಳಿಂದ 14 ಸುತ್ತುವಳಿಗಳ ಸಾಮಾನ್ಯ ಸಾರಿಗೆಯ ಸೌಲಭ್ಯವನ್ನು ಒದಗಿಸಲಾಗಿದೆ.

ದಿ:1.8.2008ರಿಂದ ಜಾರಿಗೆ ಬರುವಂತೆ ದಾವಣಗೆರೆ ವಿಭಾಗಕ್ಕೆ ಸೇರಿದ 54 ಹಾಗೂ ತುಮಕೂರು ವಿಭಾಗಕ್ಕೆ ಸೇರಿದ 43 ದೂರ ಮಾರ್ಗದ ವೇಗದೂತ ಸಾರಿಗೆಗಳಿಗೆ ಶಿರಾ ಕಡೆಯಿಂದ ತುಮಕೂರು ಕಡೆಗೆ ಬರುವಾಗ ಕಳ್ಳಂಬೆಳ್ಳ ಬಸ್ ನಿಲ್ದಾಣವನ್ನು ತಲುಪಿ ಪ್ರಯಾಣಿಕರನ್ನು ಇಳಿಸಿ/ಹತ್ತಿಸಿಕೊಂಡು ಕಾರ್ಯಾಚರಣೆ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಆ) ತುಮಕೂರಿನಿಂದ ಜವನಗೊಂಡನಹಳ್ಳಿವರೆಗೂ ಅಧಿಕ ಸಂಪರ್ಕ ಒತ್ತಡದಿಂದಾಗಿ ಅಪಘಾತಗಳು ಹೆಚ್ಚಾಗುತ್ತಿರುವುದರಿಂದ ಇದನ್ನು ಶಾಶ್ವತವಾಗಿ ತಡೆಗಟ್ಟಲು ತುಮಕೂರಿನಿಂದ ಜವನಗೊಂಡನಹಳ್ಳಿವರೆಗೆ ಶೆಟಲ್ ಬಸ್ಸುಗಳನ್ನು ಹಾಕುವ ಯೋಜನೆ ಸರ್ಕಾರದ ಮುಂದಿದೆಯೇ; ಈ ಬಗ್ಗೆ ಚಿಂತನೆ ನಡೆಸುವುದೇ?

ಜವನಗೊಂಡನಹಳ್ಳಿಯಲ್ಲಿ ಎಲ್ಲಾ ವೇಗದೂತ ಸಾರಿಗೆಗಳಿಗೆ ನಿಲುಗಡೆಯನ್ನು ಕಲ್ಪಿಸಲಾಗಿದೆ. ಹೆಚ್ಚುವರಿಯಾಗಿ ಶಿರಾದಿಂದ ಜವನಗೊಂಡನಹಳ್ಳಿಗೆ 4 ಸುತ್ತುವಳಿಗಳ ಸಾಮಾನ್ಯ ಸಾರಿಗೆಗಳನ್ನು ಆಚರಣೆ ಮಾಡಲಾಗುತ್ತಿದೆ. ಮೇಲೆ ತಿಳಿಸಿದಂತೆ ತುಮಕೂರಿನಿಂದ ಜವನಗೊಂಡನಹಳ್ಳಿಗೆ ವೇಗದೂತ ಹಾಗೂ ಶಿರಾದಿಂದ ಸಾಮಾನ್ಯ ಸಾರಿಗೆ ಸೌಲಭ್ಯ ಕಲ್ಪಿಸಿರುವುದರಿಂದ ಪ್ರತ್ಯೇಕ ಸಾರಿಗೆ ಸೌಲಭ್ಯದ ಅಗತ್ಯತೆ ಕಂಡುಬರುವುದಿಲ್ಲ.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	(189)233
2. ಸದಸ್ಯರ ಹೆಸರು	:	ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ)
3. ಉತ್ತರಿಸುವವರು	:	(ಶ್ರೀ ಬಿ.ಎಸ್.ಯಡಿಯೂರಪ್ಪ) ಮಾನ್ಯ ಮುಖ್ಯಮಂತ್ರಿಯವರು

ಅ. ಕೊಪ್ಪಳ ಜಿಲ್ಲೆಯು ಬಯಲು ಪ್ರದೇಶವಾಗಿದ್ದು, ಇಲ್ಲಿ ಜಿಂಕೆಗಳ ಸಂಖ್ಯೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು

ಆ. ಜಿಂಕೆಗಳಿಂದ ಸ್ಥಳೀಯ ರೈತರ ಬೆಳೆಗಳಿಗೆ ಹಾನಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು

ಇ. ಹಾಗಿದ್ದಲ್ಲಿ, ಕೊಪ್ಪಳ ಜಿಲ್ಲೆಯಲ್ಲಿ ಜಿಂಕೆ ವನ ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ

ಹೌದು

ಈ. ಹಾಗಿದ್ದಲ್ಲಿ, ಎಂದಿನಿಂದ ಜಿಂಕೆ ವನವನ್ನು ತೆರೆಯಲಾಗುವುದು?

ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (190) 234

ಸದಸ್ಯರ ಹೆಸರು : ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ)

ಉತ್ತರಿಸುವವರು : (ಶ್ರೀ ಜಿ.ಶ್ರೀರಾಮುಲು) ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ, ಅಭಿವೃದ್ಧಿ ಸಚಿವರು

ಅ) ಕೊಪ್ಪಳ ತಾಲ್ಲೂಕಿನ ಭಾಗ್ಯನಗರದ 62 ಮತ್ತು ಕುಷ್ಟಗಿ ರಸ್ತೆಯ 66 ಗೇಟಿನ ಮೇಲುಸೇತುವೆ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ'

ಇದೆ.

ಆ) ಹಾಗಿದ್ದಲ್ಲಿ, ಎಂದಿನಿಂದ ಕಾಮಗಾರಿ ಪ್ರಾರಂಭಿಸಲಾಗುವುದು;

ರಸ್ತೆ ಮೇಲು ಸೇತುವೆ /ಕೆಳಸೇತುವೆಗಳ ನಿರ್ಮಾಣದ ಬಗ್ಗೆ ದಿನಾಂಕ 14.7.08ರಂದು ಜರುಗಿದ ಚಾಲನ ಸಮಿತಿಯ ಸಭೆಯಲ್ಲಿ ಚರ್ಚಿಸಿದಂತೆ ಕೊಪ್ಪಳ ಜಿಲ್ಲಾಧಿಕಾರಿಗಳಿಂದ ವರದಿಯನ್ನು ಪಡೆಯಲಾಗುತ್ತಿದ್ದು, ವರದಿ ಬಂದ ನಂತರ ಎಲ್.ಸಿ.ಗಳ ಬದಲಾಗಿ ಎಲ್ಲಿ ಮೇಲುಸೇತುವೆಗಳನ್ನು ನಿರ್ಮಾಣ ಮಾಡಬೇಕೆಂಬ ಬಗ್ಗೆ ರೈಲ್ವೆ ಹಾಗೂ ಲೋಕೋಪಯೋಗಿ ಇಲಾಖೆಗಳು ಜಂಟಿ ಸಮೀಕ್ಷೆ ನಡೆಸಿದ ನಂತರ ಅಗತ್ಯ ಕ್ರಮವನ್ನು ವಹಿಸಲಾಗುವುದು.

ಇ) ಈ ಕಾಮಗಾರಿಗೆ ನಿಗದಿ ಪಡಿಸಿರುವ ಅನುದಾನವೆಷ್ಟು?

ಉದ್ಭವಿಸುವುದಿಲ್ಲ.